(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಚಾಮರಾಜನಗರದ ವಿಷಯವನ್ನು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ಗೃಹ ಸಚಿವರು ಮಧ್ಯಾಹ್ನದ ನಂತರ ಬರುತ್ತೇವೆ ಎಂದು ಹೇಳಿದ್ದಾರೆ. ಅವರು ಬಂದ ನಂತರ ಈ ವಿಷಯವನ್ನು ತೆಗೆದುಕೊಳ್ಳೋಣ. ನಂತರ ಅವಕಾಶ ಕೊಡುತ್ತೇನೆ ಸಹಕರಿಸಬೇಕು.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಇದು ಗಮನ ಸೆಳೆಯುವ ಸೂಚನೆಯಾಗಿದ್ದು ಇವತ್ತಿನ ಅಜೆಂಡಾದಲ್ಲಿಯೂ ಕೂಡ ಈ ವಿಚಾರ ಪ್ರಸ್ತಾಪವಾಗಿದೆ.

(ಗೊಂದಲ)

ಅಧ್ಯಕ್ಷರು : ಗೃಹ ಸಚಿವರು ಈಗ ವಿಧಾನಪರಿಷತ್ತಿನಲ್ಲಿ ಇದ್ದಾರೆ. ಹೇಳಿ ಕಳುಹಿಸಿದ್ದೇನೆ. ಅವರು ಬಂದ ತಕ್ಷಣ ಈ ವಿಷಯವನ್ನು ಚರ್ಚಿಸಲು ಅವಕಾಶ ಕೊಡುತ್ತೇನೆ. ಅವರು ಬಂದ ಮೇಲೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದನ್ನು ದಯಮಾಡಿ ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಮಧ್ಯಾಹ್ನ ಮೂರು ಗಂಟೆಯ ನಂತರ ಗೃಹ ಸಚಿವರು ಬರುತ್ತಾರೆ. ನಂತರ ಉತ್ತರ ಕೊಡುತ್ತಾರೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಈಗ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ ಹಾಗೂ ಸಂಸದೀಯ ಸಚಿವರು ಕೂಡ ಇದ್ದಾರೆ. ತಾವೇ ಅದರ ಬಗ್ಗೆ ಒಂದು ತೀರ್ಮಾನ ಹೇಳಿದರೆ ಆಯಿತು. ಮಾನ್ಯ ಗೃಹ ಸಚಿವರು statement ಕಳುಹಿಸಿಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ನೇರವಾಗಿ ದೃಶ್ಯ ಮಾಧ್ಯಮದ ಮುಖಾಂತರ ನ್ಯಾಯಾಂಗ ತನಿಖೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಆದರೆ, ನ್ಯಾಯಾಂಗ ತನಿಖೆಯಾಗಿಲ್ಲ. ಪೊಲೀಸರು ರೈತರ ಮೇಲೆ ಹಾಕಿರುವ ಕೇಸ್ ಅನ್ನು withdraw ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಇವತ್ತಿನವರೆಗೂ ಸಹ ಕೇಸ್

withdraw ಆಗಿಲ್ಲ. ರೈತರು ಈಗಾಗಲೇ ಪಾದಯಾತ್ರೆ ಮಾಡುತ್ತಾ ವಿಧಾನಸೌಧಕ್ಕೆ ಬರುತ್ತಿದ್ದು, ಈಗಾಗಲೇ ಬಿಡದಿಯನ್ನು ದಾಟಿದ್ದಾರೆ. ಸುಮಾರು ನೂರಾರು ಕಿ.ಮೀ.ನಷ್ಟು 5 ದಿವಸಗಳಿಂದ ಪಾದಯಾತ್ರೆ ಮಾಡುತ್ತಾ ಚಾಮರಾಜನಗರದಿಂದ ಬರುತ್ತಿದ್ದಾರೆ. ಇಂತಹ ಗಂಭೀರವಾದ ವಿಷಯವನ್ನು ಸದನದಲ್ಲಿ ಚರ್ಚೆ ಮಾಡುವುದಕ್ಕೆ ಮೂರು ದಿವಸಗಳಿಂದ ಅವಕಾಶ ಕೇಳುತ್ತಿದ್ದೇವೆ. ಇದನ್ನು ಚರ್ಚೆಗೆ ತೆಗೆದುಕೊಂಡರೂ ಸಹ ಮಂತ್ರಿಗಳಿಲ್ಲವೆಂದು ಹೇಳಿ ಮುಂದೂಡುವುದನ್ನು ನೋಡಿದರೆ ರೈತರ ಬಗ್ಗೆ ಈ ಸರ್ಕಾರಕ್ಕೆ ಎಷ್ಟೊಂದು ಕಾಳಜಿಯಿದೆ ಎಂಬುದು ಹೇಳಬೇಕಾಗುತ್ತದೆ. ಇದರಿಂದ ರೈತರ ಬಗ್ಗೆ ಎಷ್ಟು ಉದಾಸೀನರಾಗಿದ್ದಾರೆ ಎಂದು ಗೊತ್ತಾಗುತ್ತದೆ. ಹಸಿರು ಶಲ್ಯವನ್ನು ಹಾಕಿರುವಂತಹ ದಾವಣಗೆರೆ ಮತ್ತು ಚಾಮರಾಜನಗರದ ರೈತರಿಗೆ ಪೊಲೀಸರು ಲಾಠಿ ಚಾರ್ಜ್ ಅನ್ನು ಏನು ಮಾಡಿದ್ದಾರೆ, ಅದರ ಬಗ್ಗೆ ಇರುವ ವಿಚಾರವನ್ನು ಗಂಭೀರವಾಗಿ ಚರ್ಚೆ ಮಾಡುವುದಕ್ಕೆ ಮಾನ್ಯ ಶ್ಯಾಮನೂರು ಶಿವಶಂಕರಪ್ಪನವರು ಹಾಗೂ ನಾವು ಬೆಳಗ್ಗೆಯಿಂದ ಕಾದು ಕುಳಿತಿದ್ದೇವೆ. ಮಾನ್ಯ ಸಚಿವರಿಲ್ಲವೆಂದು ಅದನ್ನು ಮುಂದೂಡುವುದು ಸರಿಯೇ?

ಶ್ರೀ ಎಸ್. ಸುರೇಶ್‌ಕುಮಾರ್ : ಮಧ್ಯಾಹ್ನ ಮೂರು ಗಂಟೆಗೆ ಮಾನ್ಯ ಗೃಹ ಸಚಿವರು ಬಂದು ಉತ್ತರ ಕೊಡುತ್ತಾರೆ.

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರುವುದು.

(ಸದನವು ಮಧ್ಯಾಹ್ನ 1 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(2-30 PM)

ಸಭೆಯು ಪುನಃ ಮಧ್ಯಾಹ್ನ 2 ಗಂಟೆ 48 ನಿಮಿಷಕ್ಕೆ ಸಮಾವೇಶಗೊಂಡಿತು)

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು

ಅಧ್ಯಕ್ಷರು : ಮಾನ್ಯ ಮಹದೇವಪ್ರಸಾದ್‌ರವರೆ, ಗೃಹ ಸಚಿವರು ಮೇಲ್ಮನೆಯಲ್ಲಿರುವುದರಿಂದ ತಾವು ನೀಡಿರುವ ಗಮನಸೆಳೆಯುವ ವಿಚಾರವನ್ನು ನಾಳೆ ದಿವಸ ತೆಗೆದುಕೊಳ್ಳೋಣ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮಾನ್ಯ ಅಧ್ಯಕ್ಷರೆ, ತಾವೇ ಹೇಳಿ ಇದನ್ನು ಇವತ್ತು ಹಾಕಿಸಿದ್ದೀರಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಗೃಹ ಸಚಿವರು ಇಲ್ಲದಿದ್ದರೂ ಮಾನ್ಯ ಮುಖ್ಯಮಂತ್ರಿಗಳು ಇದ್ದಾರಲ್ಲಾ? ಮಾನ್ಯ ಮುಖ್ಯಮಂತ್ರಿಯವರು ಇದ್ದಾಗ ಗೃಹ ಸಚಿವರು ಬರಲಿ ಎಂದು ಹೇಳಿದರೆ ಹೇಗೆ? ಇದು ರೈತರ ಮೇಲೆ ಲಾಠಿಚಾರ್ಜ್ ಮಾಡಿರುವ ವಿಚಾರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದರ ಬಗ್ಗೆ ಗೃಹ ಸಚಿವರು ಹೇಳಬೇಕು.

ಶ್ರೀ ಸಿದ್ದರಾಮಯ್ಯ : ನೀವು ಹೇಳಬಾರದು ಎಂದು ಇಲ್ಲವಲ್ಲಾ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಇದರ ಬಗ್ಗೆ ವಿಧಾನ ಸಭೆಯಲ್ಲಿ ಪ್ರಸ್ತಾಪವಾಗುತ್ತದೆಯೆಂದು ರಾಜ್ಯದ ಜನರು ನೋಡುತ್ತಿದ್ದಾರೆ. ಇದರ ಪ್ರಸ್ತಾಪವನ್ನು ತಾವೇ ಹೇಳಿದಂತೆ ಮೂರು ದಿವಸ ಮುಂದಕ್ಕೆ ಹಾಕಿದ್ದೀರಿ. ಈಗ ಮತ್ತೆ ನಾಳೆ ಎಂದರೆ ಹೇಗೆ? ಇವತ್ತು ಆ ರೈತರು ಬಿಡದಿಯನ್ನು ದಾಟಿ ಬೆಂಗಳೂರಿಗೆ ಪಾದಯಾತ್ರೆಯಲ್ಲಿ ಬರುತ್ತಿದ್ದಾರೆ. ಆದ್ದರಿಂದ ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡದಿದ್ದರೆ ಹೇಗೆ?

ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ (ಮುಂದು) : ರೈತ ಮಹಿಳೆಯರಿಗೆ ಕಾಲಿನಲ್ಲಿ ಬೊಕ್ಕೆ ಎದ್ದು, ಕಾಲೆಲ್ಲಾ ಹುಣ್ಣಾಗಿ, ಬ್ಯಾಂಡೇಜ್ ಕಟ್ಟಿಕೊಂಡು ನಡೆಯಲಿಕ್ಕಾಗದೆ ಕುಂಟಿಕೊಂಡು ಬರುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಗೃಹ ಸಚಿವರನ್ನು ಕರೆಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನು 5–10 ನಿಮಿಷಗಳಲ್ಲಿ ಮಾನ್ಯ ಗೃಹ ಸಚಿವರನ್ನು ಕರೆಸುತ್ತೇನೆ. ಅವರು ಬಂದ ನಂತರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು : ಆಯಿತು, ಅವರು ಬಂದ ತಕ್ಷಣ ತೆಗೆದುಕೊಳ್ಳೋಣ.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ : ನಾವು ಸಹ ಹಿಂದೆ ಮಂತ್ರಿಗಳಾಗಿ ಕೆಲಸ ಮಾಡಿದ್ದೇವೆ. Calling attention ಪ್ರಸ್ತಾಪವಾದ ಸಂದರ್ಭದಲ್ಲಿ ಮಂತ್ರಿಗಳೇ ಉತ್ತರ ಕೊಡುತ್ತಾರೆ ಇಲ್ಲವೇ ಬೇರೆಯವರಿಗೆ ವಹಿಸಿ ಹೋಗುತ್ತಾರೆ.

ಶ್ರೀ ಸಿದ್ದರಾಮಯ್ಯ : ಸರ್ಕಾರಕ್ಕೆ ನೋಟಿಸ್ ಕೊಟ್ಟು ಗಮನ ಸೆಳೆದಿದ್ದೇವೆ. ಬೆಳಿಗ್ಗೆ ಮಾನ್ಯ ಲಾ ಮಿನಿಸ್ಟರ್‌ರವರು ಮಧ್ಯಾಹ್ನ 3 ಗಂಟೆಗೆ ಈ ವಿಷಯ ಚರ್ಚೆಗೆ ತೆಗೆದುಕೊಳ್ಳೋಣ, ಮಾನ್ಯ ಸಚಿವರು 3 ಗಂಟೆಗೆ

ಬರುತ್ತಾರೆ ಎಂದಿದ್ದರು. ಆದರೆ ಮಾನ್ಯ ಸಚಿವರು 3 ಗಂಟೆಗೆ ಬಂದಿಲ್ಲ. ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇರಬೇಕಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು, ನಾನು ಉತ್ತರ ಕೊಡುತ್ತೇನೆ. ವಿಷಯ ಪ್ರಸ್ತಾಪ ಮಾಡಿ.

ಅಧ್ಯಕ್ಷರು : ಮಾನ್ಯ ಮಹಾದೇವಪ್ರಸಾದ್‌ರವರೆ, ತಮ್ಮ ಗಮನ ಸೆಳೆಯುವ ಸೂಚನೆ ಪ್ರಸ್ತಾಪಿಸಿ.

6. ಗಮನ ಸೆಳೆಯುವ ಸೂಚನೆ :

ಅ) ವಿಷಯ : ಚಾಮರಾಜನಗರ ಹಾಗೂ ದಾವಣಗೆರೆಯಲ್ಲಿ ರೈತರು ನಡೆಸಿದ ಧರಣಿ ಹಾಗೂ ಪ್ರತಿಭಟನೆಯಲ್ಲಿ ವಿನಾಕಾರಣ ರೈತರ ಮೇಲೆ ಲಾಠಿ ಚಾರ್ಜ್ ಮಾಡಿ ದಸ್ತಗಿರಿ ಮಾಡಿರುವ ಬಗ್ಗೆ :

ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಹಾಗೂ ದಾವಣಗೆರೆಯಲ್ಲಿ ರೈತರು ನಡೆಸಿದ ಧರಣಿ ಹಾಗೂ ಪ್ರತಿಭಟನೆಯಲ್ಲಿ ವಿನಾಕಾರಣ ರೈತರ ಮೇಲೆ ಲಾಠಿ ಚಾರ್ಜ್ ಮಾಡಿ ದಸ್ತಗಿರಿ ಮಾಡಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ದಿನಾಂಕ : 07-12-2009 ರಂದು ಚಾಮರಾಜನಗರ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಘಟಕ ಹಸಿರು ಸೇನೆಯ ಮತ್ತು ಪ್ರಗತಿಪರ ಸಂಘಟನೆ ವತಿಯಿಂದ ವಿವಿಧ 26 ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀ ಮಹೇಶ್‌ಪ್ರಭು, ಶ್ರೀ ಹೊನ್ನೂರು ಪ್ರಕಾಶ್ ಮತ್ತು ಹಸಿರು ಸೇನೆಯ ಶ್ರೀ ಮಹೇಶ್‌ಕುಮಾರ್ ರವರ ನೇತೃತ್ವದಲ್ಲಿ ಅನಿರ್ಧಿಷ್ಟ ಕಾಲ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದ್ದರಿಂದ ಸುಮಾರು 900 ಜನ ರೈತ ಸಂಘ ಹಾಗೂ ಹಸಿರು ಸೇನೆ ಹಾಗೂ ಪ್ರಗತಿಪತ ಸಂಘದವರು ಚಾಮರಾಜನಗರ ಪಟ್ಟಣದ ಮುಖ್ಯ ರಸ್ತೆಯ ಮೂಲಕ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಯವರ ಕಛೇರಿಗೆ ಬಂದು ಜಿಲ್ಲಾಧಿಕಾರಿಯವರಿಗೆ ಹಕ್ಕೊತ್ತಾಯವುಳ್ಳ ಮನವಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರದ